

ಹುಟ್ಟಿಸಿದೆಯೋ ಭಗವಂತ' ಎಂದು ಹಳಹಳಿಸುತ್ತಾನೆ. ಫೋನೇನಾದರೂ ರಿಂಗಾಗಿ ಅದರಲ್ಲಿ ಕಚೇರಿಯವರ ಯಾವುದೇ ಹೆಸರು ಕಂಡರೂ 'ಥೋ... ಯಾಕಪ್ಪಾ ಮಾಡಿದ ಇವ...' ಎಂದು ಬೇಸರಿಸುತ್ತಾನೆ.

ಕಂಪನಿ ಸೇರಿದ ವರ್ಷದಲ್ಲೇ ಅರವಿಂದನಿಗೂ ಸಮಾಧಿ ಶಿವುವಿಗೂ ಆತ್ಮೀಯತೆ ಬೆಳೆದಿದೆ. ಸಹಜವಾಗಿ ಕೆಲಸದವರನ್ನು ಚೆನ್ನಾಗಿಯೇ ಮಾತನಾಡಿಸುವ ಅರವಿಂದನಿಗೆ ಶಿವುವಿನ ಕ್ಯಾರೆಕ್ಟರು ಬಹಳೇ ವಿಶಿಷ್ಟವಾಗಿ ಕಂಡದ್ದಂತೂ ಸುಳ್ಳಲ್ಲ. ಹೊಸ ಎಂಪ್ಲಾಯಿಗಳ ಮುಂದೆಲ್ಲಾ ಒಂಥರಾ ಗತ್ತು ಪ್ರದರ್ಶಿಸುವ ಶಿವು ಅರವಿಂದನಿಗೆ ಮಾತ್ರ ವಿಧೇಯನಾಗಿದ್ದ. ಶುರುವಿನಲ್ಲೊಮ್ಮೆ ಶಿವು ತನ್ನ ಬರ್ತಡೇ ಅನ್ನುತ್ತ ಚಾಕೊಲೇಟ್ ಹಿಡಿದಾಗ, ಅರವಿಂದ ಪರ್ಸಿನಿಂದ ಐನೂರು ರೂಪಾಯಿ ನೋಟು ತೆಗೆದು 'ಒಳ್ಳೆಯದಾಗಲಿ' ಎನ್ನುತ್ತಾ ಶಿವುವಿನ ಕಿಸೆಗೆ ತುರುಕಿದ್ದ. ಅಂದಿನಿಂದ ಅರವಿಂದನಿಗೆ ವಿಶೇಷ ಸವಲತ್ತುಗಳು ಸಿಗತೊಡಗಿದವು. ಆತ ಬರುವ ಮೊದಲೇ ಟೇಬಲ್ಲು, ಕಂಪ್ಯೂಟರೆಲ್ಲ ಕ್ಲೀನ್ ಆಗಿ, ನೀರಿನ ಬಾಟಲು ಸಿದ್ಧವಿರುತ್ತಿತ್ತು. ಸ್ಟೇಷನರಿಯಿಂದ ಹಿಡಿದು ಬೇಕಾದ ಕಾಗದ ಪತ್ರಗಳ ಜೆರಾಕ್ಸ್ ಕೂಡಾ ಕೇಳಿದ ಕೂಡಲೇ ಸಿಗುತ್ತಿತ್ತು... ಇತ್ಯಾದಿ.

ತನ್ನ ಹಾಗೂ ಜೇಕೆ ಸರ್ ನಡುವಿನ ನಂಟನ್ನು ಅರವಿಂದನ ಮುಂದೆ ಅರುಹುವುದೆಂದರೆ ಶಿವುವಿಗೆ ಭಾರೀ ಖುಷಿ. ''ಜೇಕೆ ಸಾರಿಗೆ ನಾನೆಂದರೆ ತುಂಬಾ ನಂಬಿಕೆ ಸಾರ್. ಒಂದ್ಸಲ ಅವರ ಏಟಿಎಂ ಕಾರ್ಡು, ಪಿನ್ನು ಕೊಟ್ಟು ನನ್ ಹತ್ರಾನೇ ಕಾಸು ತರಿಸಿದ್ರು ಗೊತ್ತಾ? ಬ್ಯಾಲೆನ್ಸ್ ಚೀಟಿ ನೋಡಿ ನನಗೆ ಶಾಕು ಸಾರ್. ಒಂದು ಕೋಟಿ ಮೂವತ್ತು ಲಕ್ಷ ಚಿಲ್ಲರೆ!'' ಎಂದು ಶಿವು ಹೆಮ್ಮೆಯಿಂದ ಹೇಳಿಕೊಂಡರೆ, 'ಶ್ರೀಮಂತಿಕೆಯ ಗತ್ತುಮತ್ತು ಇರುವುದೇ ಅದನ್ನು ಪ್ರದರ್ಶಿಸುವುದರಲ್ಲಿ. ಕೆಲವರಿಗೆ ತನ್ನ ಹತ್ತಿರ ಇಷ್ಟು ದುಡ್ಡಿದೆ ಅನ್ನುವಷ್ಟೇ ಮುಖ್ಯ, ಅದನ್ನು ಇತರರಿಗೆ ತಿಳಿಯಪಡಿಸುವುದೂ ಆಗಿರುತ್ತದೆ' ಎಂದು ಅರವಿಂದ ಮನಸ್ಸಿನಲ್ಲೇ ಅಂದುಕೊಂಡರೂ, ಅದನ್ನು ಹೇಳಲಾರದೇ, ''ಕೋಟಿಯೋ, ಲಕ್ಷವೋ? ಸೊನ್ನೆ ಸರಿಯಾಗಿ ಎಣಿಸಿದ್ಯಾ?'' ಎಂದು ಮರು ಪ್ರಶ್ನೆ ಹಾಕುತ್ತಿದ್ದ.

''ಇಲ್ಲಾ ಸಾರ್. ಸೊನ್ನೆ ಮತ್ತೆ ಮತ್ತೆ ಎಣಿಸಿ, ಗ್ಯಾರಂಟಿ ಮಾಡ್ಕೊಂಡಿದ್ದೆ...''

''ಸರಿ ಸರಿ, ಅದಕ್ಯಾಕೆ ಅಷ್ಟು ಎಕ್ಸೈಟ್ ಆಗ್ತೀಯಾ? ನಿನ್ನ ಅಕೌಂಟಿನಲ್ಲೇ ಕಾಸು ಇರೋ ಥರಾ...'' ಅರವಿಂದನ ಉತ್ತರ.

ಶಿವುಗೆ, ಈ ಅರವಿಂದ ಜೇಕೇ ಸರ್‌ನ್ನೂ ಅವರಿಗೆ ತನ್ನ ಮೇಲಿರುವ ಒಂದು ಎಕ್ಸ್‌ಟ್ರಾ ಕೇರನ್ನೂ ಸಂಪೂರ್ಣ ಪ್ರಮಾಣದಲ್ಲಿ ಒಪ್ಪಿಕೊಳ್ಳುತ್ತಿಲ್ಲ ಎನ್ನುವ ಸಂಶಯ ಇದ್ದೇ ಇತ್ತು. ಹೀಗಾಗಿ ಸಂದರ್ಭ ಸಿಕ್ಕಾಗಲೆಲ್ಲ ಆತ ಅದನ್ನು ಸಾಬೀತುಪಡಿಸಲು ಪ್ರಯತ್ನಿಸುತ್ತಲೇ ಇದ್ದ.

''ಜೇಕೆ ಸಾರ್ ಅಷ್ಟು ದುಡ್ಡಿದ್ರೂ ತುಂಬಾ ಸಿಂಪಲ್ಲು ಸಾರ್. ಒಂದು ದಿನ ಅವರ ಕಾರು ತರಲು ಡ್ರೈವರ್ ಲೇಟ್ ಮಾಡಿದ. ಏನೂ ಬೇಸರ ಮಾಡಿಕೊಳ್ದೇ, ಆಟೊದಲ್ಲಿ ಹೋದ್ರು ಸಾರ್! ಅಷ್ಟು ದೊಡ್ಡ ಮನುಷ್ಯ ಆಟೊದಲ್ಲಿ ಹೋಗೋದು ನೋಡಿ ನನಗೇ ತುಂಬಾ ಬೇಜಾರಾಗೋಯ್ತು ಸಾರ್'' ಎನ್ನುತ್ತಿದ್ದ ಶಿವು.

ಅರವಿಂದನಿಗಂತೂ ದೊಡ್ಡ ಜನರ ಇಂಥ ನಡವಳಿಕೆಗಳಲ್ಲಿ ನಂಬಿಕೆಯೇ ಇಲ್ಲ. 'ಅನೇಕ ಪ್ರಖ್ಯಾತರಿಗೆ ತಾವು ಸಿಂಪಲ್ಲು ಅಂತಾ ತೋರಿಸಿಕೊಳ್ಳುವ ಚಟವಿರುತ್ತೆ. ಒಮ್ಮೆ ಇದರ ರುಚಿ ಹತ್ತಿತೆಂದರೆ ಅದನ್ನು ಅವರು ಮಾಡುತ್ತಲೇ ಹೋಗುತ್ತಾರೆ. ಕೋಟಿಗಳಲ್ಲಿ ಸಂಪಾದಿಸುವ ಚಿತ್ರನಟನ ಪತ್ನಿಯೊಬ್ಬರು ಹವಾಯಿ ಚಪ್ಪಲಿ ಧರಿಸಿ, ಕಾಟನ್ ಸೀರೆಯುಟ್ಟು, ಏರ್‌ಪೋರ್ಟುಗಳಲ್ಲಿ ಓಡಾಡುವುದು ಕೇಳ್ಪಟ್ಟಿದ್ದೇನೆ. ಕೋಟ್ಯಧೀಶ್ವರರಿಗೆ ಮಾತ್ರ ಇದನ್ನು ಮಾಡಲು ಶಕ್ಯವೇ ಹೊರತು, ಮಧ್ಯಮವರ್ಗದ ಸಾಮಾನ್ಯ ವ್ಯಕ್ತಿಯೋರ್ವ ಸ್ಲಿಪ್ಪರ್ ಧರಿಸಿ ಏರ್‌ಪೋರ್ಟಿಗೆ ಹೋಗಲು ಸಾಧ್ಯವೇ ಇಲ್ಲ' ಎಂಬುದು